ಕಡೂರು ಡಿಸ್ಟ್ರಿಕ್ಟು.

ತಾರೀಖು 22ನೇ ಡಿಸಂಬರ್ 1886.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನು ಕ್ರಮವಾದ ವಾರಸ್ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ವಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರೇರಿಗೆ ನಾಶಪಡಿಸುತ್ತೆ.

ಜಂಟಿ ನಂ.	ಯೂನಿಯನ್ ನಂ.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಯಕ್ಕಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯ ಕೊಟ್ಟುರುವದಾಗಿ.
2	ಡಿಟೋ	58 1884—85	26—5—84		26—5—84	ತಿರಿಗೂರಲ್ಲಿರುವ ಪೌಜಾರದ ಜಾತಿ ಹುಲಿಗೌಡನ ಮಗ ನಂಜೇಗೌಡ	ತಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಜ್ಜಯ್ಯಸೇರ್ವೆಗಾರ	ತಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹುವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸುಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಸ್ಥಿರಕೀ ಕಾಫಿ ಹಿತ್ತು 50 ರೂಪಾಯಿಯನ್ನು ತೀರಿಸಿಕೊಳ್ಳುವ ಬಗ್ಗೆ 10 ವರುಷದ ವರಿಗೆ ಇಳಿಭೋಗ್ಯಾದಿ ಮಾಡಿರುವಂತೆ.

ಟಿ. ವ್ಯಾಂಡರ್‌ಲೂರ್,
ಫಾರ್ ರಿಜಿಸ್ಟ್ರಾರ್.

ದೇವೀ ಹಾಕುವ ಇಲಾಖೆ.

ಇನ್ಸ್ಟಿಹಾರ್‌ನಾಮೆ.

ತಾರೀಖು 15ನೇ ಡಿಸಂಬರ್ 1886.

ಬೆಂಗಳೂರು ಡಿಸ್ಟ್ರಿಕ್ಟಿನ ದೇವಿ ಹಾಕುವ ಇಲಾಖೆ ಡೆಪ್ಯೂಟಿ ಇನ್‌ಸ್ಪೆಕ್ಟರು ಪ್ರಕಟಪಡಿಸುವದೇನಂದರೆ, 1886ನೇ ಇಸವಿ ಡಿಸಂಬರ್ 20ನೇ ಮಂಗಳವಾರ ಲಾಗಾಯಿತು 1887ನೇ ಇಸವಿ 7ನೇ ಜನವರೀ ವರಿಗಿನ ಪಕ್ಷದಲ್ಲಿ ಸದರೀಯವರು ಇದರಡೀ ಕಂಡ ಸ್ಥಳಗಳಲ್ಲಿ ಸಂಚರಿಸುವರು:—

1 ಕೆಂಗೇರಿ 2 ಆಗರ 3 ಬೇಗೂರು.

ಉದ್ದೇಶವೇನಂದರೆ, ದೇವಿ ಹಕೀಂರಿಂದ ನಡಿಸಲ್ಪಟ್ಟ ಕೆಲಸಗಳನ್ನು ತನಿಖೆ ನೋಡುವದಲ್ಲದೆ ಅವರು ಮತ್ತು ತಾಲ್ಲೂಕು ದೇವಿ ಹಕೀಮರು ಸುದಾ ದೇವಿ ಹಾಕಿಕೊಳ್ಳಲಪೇಕ್ಷೆಯುಳ್ಳ ತಮ್ಮಾ ಜನರಿಗೂ ತಕ್ಷಣ ದೇವಿ ಹಾಕುವರು.

2 ತಮ್ಮಾ ಕಾಗದಗಳೂ ಮೇಲ್ಕಂಡ ಸ್ಥಳಗಳಿಗೆ ಕಳುಹಿಸಲ್ಪಡತಕ್ಕದ್ದು.

ಪಿ. ಎತಿರಾಜುಲು ನಾಯಡು,
ಡೆಪ್ಯೂಟಿ ಇನ್‌ಸ್ಪೆಕ್ಟರ್, ಬೆಂಗಳೂರು ಡಿಸ್ಟ್ರಿಕ್ಟು.